ರಚಿಸಿ, ಆಯ್ದ ಸ್ಥಳಗಳಲ್ಲಿ ನಿಯೋಜಿಸಿ ತಪಾಸಣೆ ನಡೆಸಲಾಗುತ್ತಿದೆ ಹಾಗೂ ಸಾರಿಗೆ ಇಲಾಖೆಯು ಹೆದ್ದಾರಿ ಪ್ರಾಧಿಕಾರ ಮತ್ತು ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಅಧಿಕ ಭಾರದ ಅದಿರು ಸಾಗಾಣಿಕೆ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ 2006–07ನೇ ಸಾಲಿನಲ್ಲಿ ಡಿಸೆಂಬರ್ 2006ರ ಅಂತ್ಯದವರೆಗೆ ಒಟ್ಟು 4,80,236 ವಾಹನಗಳನ್ನು ತಪಾಸಣೆ ಮಾಡಿ, 18,545 ವಾಹನಗಳ ಚಾಲಕರ/ಮಾಲೀಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ ರೂ 8,92,12,601/ಗಳ ರಾಜೀದಂಡವನ್ನು ಈ ಅವಧಿಯಲ್ಲಿ ವಸೂಲಿ ಮಾಡಲಾಗಿದೆ

331 (328) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಮತ್ತು 2006–07ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿ ಹಾಗೂ ನಬಾರ್ಡ್ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಮಂಜೂರಾದ ಹಣವೆಷ್ಟು,

ಆ)ಸದರಿ ಸಾಲುಗಳಲ್ಲಿ ಈ ಯೋಜನೆಯಡಿಯಲ್ಲಿ ಚಾಮರಾಜನಗರ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ 5 ವಿಧಾನ ಸಭಾ ಕ್ಷೇತ್ರಗಳಿಗೆ ಹಂಚಿಕೆಯಾಗಿರುವ ಹಣವೆಷ್ಟು (ಜಲ್ಲಾವಾರು ಮತ್ತು ಕ್ಷೇತ್ರವಾರು ವಿವರ ನೀಡುವುದು),

ಇ) ಕರ್ನಾಟಕ ರಾಜ್ಯ ಹೆದ್ದಾರಿ ವತಿಯಿಂದ ಚಾಮರಾಜನಗರ ಜಿಲ್ಲೆಗೆ 2005–06, 2006–07ನೇ ಸಾಲಿನಲ್ಲಿ ಮಂಜೂರಾದ ಹಣವೆಷ್ಟು ಹಾಗೂ ಸಂತೇಮರಳ್ಳಿ ವಿಧನ ಸಭಾ ಕ್ಷೇತ್ರಕ್ಕೆ 2005–06, 2006–07ನೇ ಸಾಲಿನಲ್ಲಿ ಮಂಜೂರಾದ ಹಣವೆಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು).

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಲ್ಲಿ 2005–06 ರಲ್ಲಿ 110 20 ಕೋಟಿ ರೂ ಹಾಗೂ 2006–07ನೇ ಸಾಲಿನಲ್ಲಿ 127 45 ಕೋಟಿ ರೂ ಗಳು ಮಂಜೂರಾಗಿದೆ ನಬಾರ್ಡ್ ಯೋಜನೆಯಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ 2005–06ರಲ್ಲಿ 258 90 ಕೋಟಿ ರೂ ಹಾಗೂ 2006–07ರ ಮೊದಲ ಹಂತದಲ್ಲಿ ಈವರೆಗೆ 228 18 ರೂ ಗಳ ಮೊತ್ತದ ಕಾಮಗಾರಿಗಳು ಮಂಜೂರಾಗಿದೆ

ಆ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಚಾಮರಾಜನಗರ ಜಿಲ್ಲೆಗೆ ಮಂಜೂರಾದ ಮೊತ್ತ

(ಲಕ್ಷ ರೂ ಗಳಲ್ಲಿ)

ವಿಧಾನ ಸಭಾ ಕ್ಷೇತ್ರ	2005–06		2006–07	
	ಕಾಮಗಾರಿ ಸಂಖ್ಯೆ	ಮಂಜೂರಾದ ಹಣ	ಕಾಮಗಾರಿ ಸಂಖ್ಯೆ	ಮಂಜೂರಾದ ಹಣ
ಚಾಮರಾಜ ನಗರ	–	–	1	100 00
ಗುಂಡ್ಲುಪೇಟೆ	1	60 00	1	50 00
ಹನೂರು	1	150 00	1	100 00
ಕೊಳ್ಳೇಗಾಲ	–	–	1	50 00
ಸಂತೇಮರಳ್ಳಿ	–	–	1	50 00
ಒಟ್ಟು	2	210	5	250 00

ನಬಾರ್ಡ್ ಯೋಜನೆಯಡಿ ಚಾಮರಾಜನಗರ ಜಿಲ್ಲೆಗೆ ಮಂಜೂರಾದ ಕಾಮಗಾರಿಗಳು ಈ ಕೆಳಗಿನಂತಿದೆ

(ಲಕ್ಷ ರೂ ಗಳಲ್ಲಿ)

ವಿಧಾನ ಸಭಾ ಕ್ಷೇತ್ರ	2005–06		2006–07	
	ಕಾಮಗಾರಿ ಸಂಖ್ಯೆ	ಮಂಜೂರಾದ ಹಣ	ಕಾಮಗಾರಿ ಸಂಖ್ಯೆ	ಮಂಜೂರಾದ ಹಣ
ಚಾಮರಾಜ ನಗರ	3	202	1	44
ಗುಂಡ್ಲುಪೇಟೆ	4	171	3	149
ಹನೂರು	1	190	2	85
ಕೊಳ್ಳೇಗಾಲ	2	84	1	57
ಸಂತೇಮರಳ್ಳಿ	3	103	1	98
ಒಟ್ಟು	13	750	8	433

ಇ) ಚಾಮರಾಜನಗರ ಜಿಲ್ಲೆಗೆ 2005–06 ಮತ್ತು 2006–07ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ ವತಿಯಿಂದ ವಿವಿಧ ಯೋಜನೆಗಳಿಗೆ ನೀಡಿದ ಅನುದಾನ ಕೆಳಗಿನಂತಿದೆ

ಕ್ರ.ಸಂ	ಯೋಜನೆ	2005–06	2006–07
1	ರಾಜ್ಯ ಹೆದ್ದಾರಿ ನಿರ್ವಹಣೆ	1147 00	–
2	ಸೇತುವೆ ನಿರ್ಮಾಣ	107 00	–
3	ರಸ್ತೆ ಅಭಿವೃದ್ಧಿ	340 00	–
	ಒಟ್ಟು	1594 00	–

ಸಂತೇಮರಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾದ ಹಣ ವಿವಿಧ ಯೋಜನೆಗಾಗಿ ನೀಡಿದ ಅನುದಾನ,

ಕ್ರ.ಸಂ	ಯೋಜನೆ	2005–06	2006–07
1	ಸೇತುವೆ	45 00	–
2	ರಸ್ತೆ ಅಭಿವೃದ್ಧಿ	110 00	–
	ಒಟ್ಟು	155 00	–

332 (329) ಶ್ರೀ ಧ್ರುವನಾರಾಯಣ್ ಆರ್ (ಸಂತೇಮರಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ರಮ ಮರಳು ದಂಧೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು,

ಆ) ಈ ಮರಳು ದಂಧೆಯಿಂದ ಅಂತರ್ಜಲದ ಮಟ್ಟ ಕುಸಿಯುತ್ತಿರುವುದರ ಬಗೆಗಿನ ವೈಜ್ಞಾನಿಕ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಪರವಾನಿಗೆ ಇಲ್ಲದೆ ಅಕ್ರಮವಾಗಿ ಮರಳನ್ನು ಕಳ್ಳಸಾಗಾಣಿಕೆ ಮಾಡುತ್ತಿರುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ನಿಯಂತ್ರಣವೇನು,

ಈ) ಚಾಮರಾಜನಗರ ಜಿಲ್ಲೆಯಲ್ಲಿ ಪರವಾನಿಗೆ ಹೊಂದಿ ಮತ್ತು ಪರವಾನಿಗೆ ಹೊಂದಿಲ್ಲದೆ ಮರಳು ಸಾಗಾಣಿಕೆ ಮಾಡುತ್ತಿರುವವರ ಸಂಖ್ಯೆ ಎಷ್ಟು,

ಉ) ಪರವಾನಿಗೆ ಇಲ್ಲದೆ ಸಾಗಾಣಿಕೆ ಮಾಡುವವರ ವಿರುದ್ಧ ಸರ್ಕಾರ ಎಷ್ಟು ಪ್ರಮಾಣದಲ್ಲಿ ಕೇಸು ದಾಖಲಿಸಿದೆ,

ಊ) ದಂಡದ ರೂಪದಲ್ಲಿ ಸರ್ಕಾರಕ್ಕೆ ಬಂದಿರುವ ಹಣವೆಷ್ಟು?